## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 270/**19** |

| | | |
|---|---|---|
| ಸಾಕ್ಷಿದಾರರ ಹೆಸರು | ಅಂಕಬೋವಿ | |
| ತಂದೆಯ ಹೆಸರು | ಸುರುಗಭೋವಿ | ಸಾಕ್ಷಿಗೆ ದಿಃ **05.08.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **58** ವರ್ಷ | |
| ಉದ್ಯೋಗ | ಗಾರೆ ಕೆಲಸ | ಪಿ.ಡಬ್ಲ್ಯೂ **-11** |
| ವಾಸ ಸ್ಥಳ | ಗಾಯಿತ್ರಿಪುರಂ, ಮೈಸೂರು | ಸಿ.ಡಬ್ಲ್ಯೂ **-13** |

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಆರೋಪಿತನನ್ನು ನಾನು ನೋಡಿರುವುದಿಲ್ಲ. ರೇಷ್ಮಾ ಬಾನು ಇವರು ಸಾಯುವುದಕ್ಕಿಂತ 3 ದಿನದ ಮೊದಲು ನಮ್ಮ ಮನೆ ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದರು. ಸುಮಾರು 3 ವರ್ಷದ ಹಿಂದೆ ನಾನು ಕೆಲಸಕ್ಕೆ ಹೋದಾಗ ರೇಷ್ಮಾ ಬಾನು ಮೃತಪಟ್ಟ ಬಗ್ಗೆ ನನ್ನ ಹೆಂಡತಿ ನನಗೆ ತಿಳಿಸಿದಳು. ನಾನು ಮಧ್ಯಾಹ್ನ 3.00 ಗಂಟೆಗೆ ಮನೆಗೆ ಬಂದೆನು. ಅವರು ಹೇಗೆ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ನಾನು ಶವವನ್ನು ಕೂಡಾ ನೋಡಿರುವುದಿಲ್ಲ. ಪೊಲೀಸರ ಮುಂದೆ ಈ ಕೇಸಿನ ಬಗ್ಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ವಿನಂತಿಸಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ದಿಃ 25.07.2019 ರಂದು ಮಧ್ಯಾಹ್ನ 3.00 ಗಂಟೆಯ ಸಮಯಕ್ಕೆ ರೇಷ್ಮಾ ಬಾನು ಕತ್ತಿನಲ್ಲಿ ರಕ್ತ ಬಂದು ಮಕ್ಕಡೆ ಹಾಲಿನಲ್ಲಿ ಬಿದ್ದಿರುತ್ತಾರೆ ಎಂದು ನನ್ನ ಹೆಂಡತಿ ನನಗೆ ತಿಳಿಸಿ ನಂತರ 108 ಆ್ಯಂಬುಲೇನ್ಸಗೆ ತಿಳಿಸಿದಳು ಅವರು ಬಂದು ನೋಡಿ ಮೃತಪಟ್ಟಿದ್ದಾಳೆ ಎಂದು ತಿಳಿಸಿದರು ಎಂದು ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಆರೋಪಿತನು ಬೆಳಿಗ್ಗೆ ಮನೆಗೆ ಬಂದು ಬಾಗಿಲು ತಟ್ಟಿದ, ಆಗ ರೇಷ್ಮಾ ಬಾನು ಬಾಗಿಲು ತೆರೆದಳು, ಆರೋಪಿತನು ಮನೆಯ ಒಳಗೆ ಹೋಗಿ ಬಾಗಿಲು ಹಾಕಿಕೊಂಡಿದ್ದನು, ನನ್ನ ಹೆಂಡತಿ ನೋಡಿ ನನಗೆ ತಿಳಿಸಿದಳು ಎಂದು ಸೂಚಿಸುವುದು ಸರಿಯಲ್ಲ. ನನ್ನ ಹೆಂಡತಿ ಸ್ನಾನಕ್ಕೆ ಹೋಗಿ ಬರುವಷ್ಟರಲಿ ಮಗು ಅಳುತ್ತಿತ್ತು. ನನ್ನ ಹೆಂಡತಿ ಹೋಗಿ ನೋಡಿದಾಗ ಮಗು ಅಳುತ್ತಿತ್ತು. ಆರೋಪಿತನು ಅಲ್ಲಿ ಇರಲಿಲ್ಲ ಎಂದು ನನ್ನ ಹೆಂಡತಿ ನನಗೆ ಹೇಳಿದಳು ಎಂದು ಸೂಚಿಸುವುದು ಸರಿಯಲ್ಲ. ನೌಶಾದ ಮತ್ತು ಮೃತಳಿಗೂ ಅನೈತಿಕ ಸಂಬಂಧ ಇತ್ತು ಎಂದು ಆರೋಪಿ ಗಲಾಟೆ ಮಾಡುತ್ತಿದ್ದ ಎನ್ನುವ ವಿಷಯ ನಾನು ತಿಳಿದುಕೊಂಡಿದ್ದೆ ಎಂದು ಸೂಚಿಸುವುದು ಸರಿಯಲ್ಲ. ಆ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು :- ಆರೋಪಿ ಪರ ವಕೀಲರಿಂದಃ-**

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು